ಮೂರ್ತಿಗಳ ಮೇಲೆ ಅಥವಾ ನಿಮ್ಮ ಪೂರ್ವಜರ ಮೇಲೆ ಆಣೆ ಮಾಡಬೇಡಿ

ಅಬ್ದುರ್ರಹ್ಮಾನ್ ಬಿನ್ ಸಮುರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ)
ಹೇಳಿದರು: "ಮೂರ್ತಿಗಳ ಮೇಲೆ ಅಥವಾ ನಿಮ್ಮ ಪೂರ್ವಜರ ಮೇಲೆ ಆಣೆ ಮಾಡಬೇಡಿ."
[صحيح] [رواه مسلم]

ಮೂರ್ತಿಗಳ ಮೇಲೆ ಆಣೆ ಮಾಡುವುದನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ನಿಷೇಧಿಸಿದ್ದಾರೆ. ಮೂರ್ತಿಗಳು ಎಂದರೆ ಬಹುದೇವವಿಶ್ವಾಸಿಗಳು ಅಲ್ಲಾಹನ ಹೊರತಾಗಿ ಆರಾಧಿಸುವ ವಿಗ್ರಹಗಳು. ಅವರ ಅತಿರೇಕ ಮತ್ತು ಸತ್ಯನಿಷೇಧಕ್ಕೆ ಇವುಗಳೇ ಕಾರಣ. ಅದೇ ರೀತಿ ಪೂರ್ವಜರ ಮೇಲೆ ಆಣೆ ಮಾಡುವುದನ್ನು ಕೂಡ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಿಷೇಧಿಸಿದ್ದಾರೆ. ಏಕೆಂದರೆ, ಅಜ್ಞಾನಕಾಲದಲ್ಲಿ ಜಂಭ ಮತ್ತು ದೊಡ್ಡಸ್ಥಿಕೆಯಿಂದ ತಮ್ಮ ಪೂರ್ವಜರ ಮೇಲೆ ಆಣೆ ಮಾಡುವುದು ಅರಬ್ಬರ ವಾಡಿಕೆಯಾಗಿತ್ತು.

http://www.sunnah.global/hadeeth/kn/show/8959